ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/02/ಎಲ್ಆರ್‌ಡಿಸಿ/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 25-07-2018

**-: ಸುತ್ತೋಲೆ :-**

ವಿಷಯ: 2018-19 ನೇ ಸಾಲಿನ "42ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ವನ್ನು ಆಯೋಜಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರದ ಸಂಖ್ಯೆ: ಇಡಿ 097 ಟಿಪಿಇ 2016, ದಿ: 03-10-2016.

* * * * * *

ವಿದ್ಯಾರ್ಥಿಗಳಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಯನ್ನು ಹೊರತರುವ ಉದ್ದೇಶದಿಂದ ಪ್ರತಿ ವರ್ಷವೂ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟವನ್ನು ರಾಜ್ಯದ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದ್ದು, ಕಳೆದ ವರ್ಷ ಅಂದರೆ 2017-18ನೇ ಸಾಲಿನ 41ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟವನ್ನು ಆಚಾರ್ಯ ಪಾಲಿಟೆಕ್ನಿಕ್, ಸೋಲದೇವನಹಳ್ಳಿ ಬೆಂಗಳೂರು, ಇಲ್ಲಿ ನಿರ್ದೇಶನಾಲಯದ ಸಹಯೋಗದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ಸುಮಾರು 1100 ರಿಂದ 1200 ವಿದ್ಯಾರ್ಥಿಗಳು, 120 ರಿಂದ 140 ಉಪನ್ಯಾಸಕರು/ಸಿಬ್ಬಂದಿ ವರ್ಗದವರು ಭಾಗವಹಿಸುವ ಸಂಬವವಿದ್ದು, ಸದರಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯವರಿಗೆ ಎರಡು ದಿನಗಳಂದು ಊಟ ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಲು ಹಾಗೂ ಕ್ರೀಡಾಕೂಟವನ್ನು ಆಯೋಜಿಸಲು ತಗಲುವ ಇತರೆ ವೆಚ್ಚಗಳನ್ನು ಭರಿಸಲು ಸರ್ಕಾರದ ವತಿಯಿಂದ **12 ಲಕ್ಷ ರೂಪಾಯಿಗಳ (ಹನ್ನೆರಡು ಲಕ್ಷ ರೂಪಾಯಿಗಳು ಮಾತ್ರ)** ಅನುದಾನವನ್ನು ನೀಡಲಾಗುವುದು.

2018-19 ನೇ ಸಾಲಿನ "42ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ವನ್ನು 2019 ರ ಜನವರಿ 4ನೇ ವಾರ ಅಥವಾ ಫೆಬ್ರವರಿ ಮೊದಲನೇ ವಾರದಲ್ಲಿ ಆಯೋಜಿಸಲಾಗುವುದು, ಸದರಿ ಕ್ರೀಡಾಕೂಟವನ್ನು ಆಯೋಜಿಸಲು ಬೇಕಾಗಿರುವ ಕ್ರೀಡಾಂಗಣ ಲಭ್ಯವಿರುವ ಹಾಗೂ ಮೇಲ್ಕಂಡ ಸೌಲಭ್ಯಗಳನ್ನು ನೀಡಿ 2018-19 ನೇ ಸಾಲಿನ **"42ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ"** ವನ್ನು ಆಯೋಜಿಸಲು ಇಚ್ಛಿಸುವ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು ತಮ್ಮ ಸಮ್ಮತಿಯನ್ನು **ದಿನಾಂಕ:14.08.2018** ರೊಳಗಾಗಿ ಈ ಕಛೇರಿಗೆ ತಿಳಿಸಲು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ)

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ.
2. ಇ-ಗೌರ್ವನೆನ್ಸ್ ವಿಭಾಗಕ್ಕೆ ಡಿಟಿಇ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

ಪ್ರತಿ:

1. ಜಂಟಿ ನಿರ್ದೇಶಕರು(ಯೋಜನೆ) ಇವರ ಮಾಹಿತಿಗಾಗಿ.
2. ಡಿವಿಪಿ(1) ವಿಭಾಗಕ್ಕೆ ಮಾಹಿತಿಗಾಗಿ ಮತ್ತು ಉಲ್ಲೇಖದಲ್ಲಿನ ಸರ್ಕಾರದ ಪತ್ರದನ್ವಯ ಅನುದಾನವನ್ನು ಕಾಯ್ದಿರಿಸುವುದು.